ಒ.ಎಸ್.- 69/2014
ಪಿ.ಡಬ್ಲ್ಯು - 01

ದಿನಾಂಕ 20-11 -2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ - ವಾದಿಯರ ಪರ ವಕೀಲರಿಂದಃ**

ಅರ್ಜಿಯ ಮೇಲೆ ಮಾಡಿದ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಮುಂದುವರಿದ ಮುಖ್ಯ ವಿಚಾರಣೆ ಮಾಡಲು ಅನುಮತಿ ನೀಡಿದ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆ ಮಾಡಲಾಯಿತು .

| | |
|---|---|
| ನಿಪಿ-15 | ಗೋಪಾಲ ಕುಕ್ಕಾಜೆ ರವರ ಮರಣ ಪ್ರಮಾಣ ಪತ್ರ |

ಗೋಪಾಲ ಕುಕ್ಕಾಜೆ ರವರು ಕೊಟ್ಟ ಪ್ರಮಾಣ ಪತ್ರ ಎಂದು ಹೇಳಿ ಸಾಕ್ಷಿಯು ಒಂದು ಪ್ರಮಾಣ ಪತ್ರವನ್ನು ಅರ್ಜಿಯ ಜೊತೆ ಹಾಜರುಪಡಿಸಿರುತ್ತಾರೆ. ಸದ್ರಿ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿ ದಾಖಲಾತಿಗಳನ್ನು ಸ್ವೀಕರಿಸಿರುತ್ತದೆ . ಅರ್ಜಿಯ ಜೊತೆ ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಸ್ವೀಕರಿಸಿರುವುದರಿಂದ ಅವುಗಳೆಲ್ಲವನ್ನು ನಿಶಾನೆಯನ್ನಾಗಿ ಮಾಡಬೇಕು ಎಂಬ ತರ್ಕ ಸರಿ ಇರುವುದಿಲ್ಲ . ಸದರಿ ಪ್ರಮಾಣ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ ವ್ಯಕ್ತಿ ಬೇರೆ ಇಲಾಖೆಗೆ ಕೊಟ್ಟ ಅದರ ದೃಢೀಕೃತ ಪ್ರತಿಯನ್ನು ತಂದು ಹಾಜರುಪಡಿಸಿದ್ದರೇ ಅದನ್ನು ನಿಶಾನೆಯನ್ನಾಗಿ ಮಾಡಬಹುದು ಹೊರತು ವಾದಿಯು ಗೋಪಾಲ ಕುಕ್ಕಾಜೆ ರವರೇ ಸದ್ರಿ ಪ್ರಮಾಣ ಪತ್ರವನ್ನು ತಯಾರಿಸಿ ಕೊಟ್ಟರು ಎಂದು ಸಲ್ಲಿಸಿರುವುದನ್ನು ನಿಶಾನೆಯನ್ನಾಗಿ ಮಾಡಲು ಬರುವುದಿಲ್ಲ . ಸದ್ರಿ ಪ್ರಮಾಣ ಪತ್ರದಲ್ಲಿ ದಿನಾಂಕವನ್ನು ಮಾತ್ರ ನಮೂದಿಸಿದ್ದು, ಆದರೇ ತಯಾರಿಸಿದ ಇಸವಿಯನ್ನು ಯಾವ ಕಾರಣಕ್ಕಾಗಿ ನಮೂದು ಮಾಡಿರುವುದಿಲ್ಲ ಎನ್ನುವುದನ್ನು ಸಹ ತಿಳಿಸಿರುವುದಿಲ್ಲ. ಸದ್ರಿ ಪ್ರಮಾಣ ಪತ್ರವು ಯಾವುದೇ ಸ್ಟ್ಯಾಂಪ್ ಶುಲ್ಕವನ್ನು ಕಟ್ಟಿರುವುದಿಲ್ಲ .ಈ ಪ್ರಮಾಣ ಪತ್ರದ ಪ್ರಮಾಣಕರ್ತ ಈಗಾಗಲೇ ಮೃತ ಪಟ್ಟಿರುವುದರಿಂದ ಸದ್ರಿ ಪ್ರಮಾಣ ಪತ್ರವನ್ನು ನಿಶಾನೆಯನ್ನಾಗಿ ಮಾಡಲು ಬರುವುದಿಲ್ಲ. ವಾದಿ ಪರ ವಕೀಲರು ಮಾಡಿದ ಮನವಿಯನ್ನು ತಿರಸ್ಕರಿಸಲಾಗಿದೆ .

**ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಎಸ್ .ಎ ವಕೀಲರಿಂದಃ**

ದಾವಾ ಸ್ವತ್ತಿನಲ್ಲಿ ಒಕ್ಕಲಿದ್ದವರನ್ನು ತೆರವುಗೊಳಿಸಿದ ನಂತರ ಕ್ರಯಪತ್ರವನ್ನುಬರೆದುಕೊಡಬೇಕು ಎಂದು ಕರಾರಿನಲ್ಲಿ ಷರತ್ತು ಇದೆಯೇ ಎಂದು ನನಗೆ ನೆನಪಿಲ್ಲ . ಸಾಕ್ಷಿಗೆ ನಿಪಿ1 ನ್ನು ತೋರಿಸಿ ಅದರಲ್ಲಿ ಷರತ್ತು ಇದೆಯೇ ಎಂದು ಕೇಳಲಾಗಿ ಸಾಕ್ಷಿ ನಿಪಿ 1 ನ್ನು ನೋಡಿ 2 ನೇ ಪಕ್ಷಗಾರರು ದಾವಾ ಸ್ವತ್ತಿನಲ್ಲಿ ಇದ್ದವರನ್ನು ತೆರವುಗೊಳಿಸಿ ತದನಂತರ ಕ್ರಯಪತ್ರ ಮಾಡಿಕೊಡಬೇಕು ಎಂದು ಷರತ್ತು ಇದೆ ಎಂದು ತಿಳಿಸಿರುತ್ತಾರೆ . ದಾವಾ ಸ್ವತ್ತಿನಲ್ಲಿ ಇದ್ದವರನ್ನು ಒಕ್ಕಲೆಬ್ಬಿಸುವ ಕರ್ತವ್ಯ ವಾದಿಯದ್ದು ಎಂದರೆ ಸರಿ . ದಾವಾ ಸ್ವತ್ತಿನಲ್ಲಿ ಒಕ್ಕಲು ಇದ್ದ ವ್ಯಕ್ತಿಯ ಹೆಸರು ವಿಜಯ ಕುಮಾರ್ . ವಿಜಯ ಕುಮಾರ್ ನ ವಕೀಲರು ಮತ್ತು ನಮ್ಮ ವಕೀಲರು ಈ ದಾವೆ ನಡೆಸುತ್ತಿರುವ ವಕೀಲರೇ ಎಂದರೆ ಸರಿ . ನಿಪಿ 2 ಮತ್ತು 3 ನ್ನು ಯಾವಾಗ ಮಾಡಿದ್ದು ಎಂದು ನೆನಪಿಲ್ಲ, ಅದರೇ ಗೋಪಾಲ ಕುಕ್ಕಜೆ ಎನ್ನುವವರು ತಯಾರು ಮಾಡಿರುತ್ತಾರೆ . ಗೋಪಾಲ ಕುಕ್ಕಜೆ ಗೆ ಈ ರೀತಿ ಬರೆಯಿರಿ ಎಂದು ನಾನು ಹೇಳಲಿಲ್ಲ .07-12-2007 ರಂದು ನಾನು ವಾದಿಗೆ ಎಷ್ಟು ಹಣ ಕೊಟ್ಟೆ ಎಂದು ಈಗ ದಾಖಲೆ ನೋಡದೇ ಹೇಳಲು ಸಾಧ್ಯವಿಲ್ಲ . 07-08-2008 ರಂದು ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದಾದರೂ ಕರಾರು ಪತ್ರ ಆಗಿದೆಯೇ ಎಂದರೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ . ನನ್ನ ಮತ್ತು ಪ್ರತಿವಾದಿ ನಡುವೆ ಒಂದು ಕರಾರು ಪತ್ರ ಆಗಿರುತ್ತದೆ . ಆ ಮೇಲೆ ಆಗಿರುವ ಕರಾರು ಪತ್ರದ ಬಗ್ಗೆ ನನಗೆ ನೆನಪಿಲ್ಲ . ನನ್ನ ಹೆಂಡತಿಯ ಹೆಸರು ಮಾಲತಿ . ಕರಾರು ಆದ ದಿನ ನಾನು ರೂ 1,00,000 ಹಣ ಕೊಟ್ಟಿದ್ದನ್ನು ಬಿಟ್ಟರೆ ನನ್ನ ಹೆಂಡತಿಯ ಚೆಕ್ ನ್ನು ಪ್ರತಿವಾದಿಗೆ ಕೊಟಿದ್ದೆನೋ ಇಲ್ಲವೋ ನೆನಪಿಲ್ಲ . ದಿ. 11-04-2009 ರಲ್ಲಿ ಪ್ರತಿವಾದಿ ನೋಟಿಸು ಕೊಟ್ಟಾಗ ಅಥವಾ ನಂತರದಲ್ಲಿ ನಾವು ಕೊಟ್ಟಂತಹ ಚೆಕ್‌ನ ಬಗ್ಗೆ ವಿಮರ್ಷೆ ಮಾಡಿದ್ದಿರಾ ಎಂದರೆ ಮಾಡಿರುವುದಿಲ್ಲ . ಸಾಕ್ಷಿಗೆ ಚೆಕ್ ಸಂಖ್ಯೆ 504144 ಕೆನರಾ ಬ್ಯಾಂಕ್ , ಕಾರ್ಕಳದ ದಿನಾಂಕ ನಮೂದಿಸದೇ ಇರುವ ಚೆಕ್ ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಇದು ನನ್ನ ಹೆಂಡತಿ ಮಾಲಿತಿಗೆ ಸೇರಿದ್ದ ಚೆಕ್ ಎಂದು ಒಪ್ಪಿಕೊಂಡಿದ್ದರಿಂದ ಸದ್ರಿ ಚೆಕ್‌ನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿ. 02-05-2009 ರ ಚೆಕ್ ಸಂಖ್ಯೆ 813863 ರ ಸಿಂಡಿಕೇಟ್ ಬ್ಯಾಂಕ್ , ಬಜಗೋಳಿ

ಇರುವ ಚೆಕ್ ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಇದು ನನಗೆ ಸೇರಿದ ಚೆಕ್ ಎಂದು ಒಪ್ಪಿಕೊಂಡಿದ್ದರಿಂದ ಸದ್ರಿ ಚೆಕ್‌ನ್ನು ನಿಡಿ-2 ಎಂದು ಗುರುತಿಸಲಾಯಿತು.

**ಊಟದ ಸಮಯವಾಗಿದ್ದರಿಂದ ಮುಂದುವರಿದ ಪಾಟೀ ಸವಾಲಿಗೆ ಮದ್ಯಾಹ್ನಕ್ಕೆ ಮುಂದೂಡಲಾಯಿತು**

ನಾನು ನನ್ನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಲೆಕ್ಕಪತ್ರವನ್ನು ಇಟ್ಟುಕೊಳ್ಳುತ್ತೇನೆ . ನಾನು ನಿಡಿ 1 ಮತ್ತು 2 ಚೆಕ್ ಗಳನ್ನು ಯಾವಾಗ ಕೊಟ್ಟೆ ಎಂದು ನನಗೆ ನೆನಪಿಲ್ಲ . ನಾನು 1,00,000 ಕೊಟ್ಟ ದಿನವೇ ನಿಡಿ 1 ಮತ್ತು 2 ಚೆಕ್ ಗಳನ್ನು ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದರೆ ನೆನಪಿಲ್ಲ . ಜಜಗೋಳಿ ಶಾಖೆಯಲ್ಲಿ ನಾನು ಚೆಕ್ ಕೊಡುವ ದಿನ ಖಾತೆ ಊರ್ಜಿತದಲ್ಲಿತ್ತು ಎಂದರೆ ಸರಿ . ನಾನು ಜಜಗೋಳಿಯ ಶಾಖೆಯ ಖಾತೆಯನ್ನು ಪರಿಶೀಲಿಸಿರುತ್ತೇನೆ ಆಗ ಯಾವುದೇ ಚೆಕ್ ಸದ್ರಿ ಖಾತೆಗೆ ಹಾಜರುಪಡಿಸಿರುವುದಿಲ್ಲ. ನನ್ನ ಹೆಂಡತಿಯ ಹೆಸರಿನಲ್ಲಿದ್ದ ಚೆಕ್ ನ್ನು ನಾನು ಕೊಟ್ಟಿಲ್ಲ . ನಿಮ್ಮ ಹೆಂಡತಿಯನ್ನು ಚೆಕ್ ಕೊಟ್ಟಿದ್ದೀರಾ ಎಂದು ಕೇಳಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ . ಚೆಕ್ ಕೊಟ್ಟ ದಿನ ನನ್ನ ಖಾತೆಯಲ್ಲಿ ಚೆಕ್ ನಲ್ಲಿ ನಮೂದಿಸಿರುವ ಹಣ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತೀರಾ ಎಂದರೆ ಸಾಕ್ಷಿ ಚೆಕ್ ನಲ್ಲಿ ದಿನಾಂಕ ನಮೂದಿಸಿರುವುದಿಲ್ಲ ಸಾಕ್ಷಿ ಮುಂದುವರಿದು ಮತ್ತೊಂದು ಸೆಲ್ಫ್ ಚೆಕ್ ಎಂದು ತಿಳಿಸಿರುತ್ತಾರೆ . ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಬೇಡಿ ಎಂದು ಲಿಖಿತವಾಗಿ ಬರೆದು ಕೊಟ್ಟಿಲ್ಲ . ಚೆಕ್ ಗಳನ್ನು ವಾಪಸ್ಸು ಕೊಡಿ ಎಂದು ನಾವು ಪ್ರತಿವಾದಿಗೆ ನೋಟಿಸು ಕೊಟ್ಟಿಲ್ಲ . ಪ್ರತಿವಾದಿಗೆ ಮೋಸ ಮಾಡಬೇಕು ಎಂಬ ಉದ್ದೇಶದಿಂದ ನಿಡಿ 1 ಮತ್ತು 2 ನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ನಿಪಿ 2 ಮತ್ತು 3 ರಲ್ಲಿ ಕಾಣಿಸಿರುವ ಹಣವನ್ನು ಪ್ರತಿವಾದಿಗಳಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ . ನಿಪಿ 2 ಮತ್ತು 3 ರಲ್ಲಿ ಕಾಣಿಸಿರುವ ಸಹಿ ಪ್ರತಿವಾದಿಯದ್ದಲ್ಲ ಎಂದರೆ ಸರಿಯಲ್ಲ . ಆ ಸಹಿಯನ್ನು ನೀವು ಎಲ್ಲಿ ಬರೆದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ .

ಒ.ಎಸ್.- 69/2014
ಪಿ.ಡಬ್ಲ್ಯು - 01

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.